## ವಿವರ್ಣಗೊಂಡ ಊರು ಮತ್ತು ಬದುಕು

ಕತ್ತಲೆ, ಪ್ರಜ್ಞಾಹೀನತೆ, ನಿದ್ರೆ, ಸಾವುಗಳೆಲ್ಲಾ ಒಂದೇ ಆಗಿರಬೇಕು.

ಪ್ರಮಾಣ ಕೆಲವೊಮ್ಮೆ ಹೆಚ್ಚು ಅಥವಾ ಕಡಿಮೆಯಿರುತ್ತದೆ. ಅಷ್ಟೇ. ಬದುಕಿನ ದಾರ ಮುರಿದು ಬೀಳದಂತಿರಲು ನಡುವೆ ಕನಸುಗಳು ಬರುತ್ತವೆ. ನಿದ್ರೆಯಲ್ಲಿ ಕನಸು ಕೊನೆಗೊಳ್ಳುವಾಗ ಜೀವನವು ಕೊನೆಗೊಳ್ಳುವುದೇ ಎಂಬ ಭಯ ಆಗಲೂ ನನ್ನನ್ನು ಕಾಡುತ್ತಿತ್ತು.

ಶ್ರೀದೇವಿ ನನ್ನ ಪಕ್ಕದಲ್ಲಿ ಮಲಗತೊಡಗಿದಾಗ ನಾನು ಇಷ್ಟ ಪಡತೊಡಗಿದ್ದೆ. ನಿದ್ರಿಸುವ ಮೊದಲು ದೀಪ ಆರಿಸಿದಾಗ ಚಡಪಡಿಸುತ್ತಿದ್ದೆ. ಶ್ರೀದೇವಿ ಹೇಳಿದ್ದಳು.

‘ಹೆದರಬೇಡಿ. ಬೆಳಕು ನನ್ನ ಕಣ್ಣುಗಳಲ್ಲಿದೆ’

ಕಾರ್ಗತ್ತಲೆಯಲ್ಲಿನ ಬೆಳಕಾಗಿತ್ತು ಅವಳ ಮೆದುಧ್ವನಿ, ನಸುಬೆಚ್ಚಗಿನ ನಿಶ್ವಾಸ ಮತ್ತು ತಲೆಗೂದಲಿನ ವಾಸನೆ. ಅವೆಲ್ಲವನ್ನು ಊದಿ ಆರಿಸಿ ಕತ್ತಲೆಗಿಳಿದು ಓಡಿದ್ದೆ.

ಡ್ರೈವರ್ ಹಾಗೂ ನನಗೂ ಆಯಾಸವಾಗಿತ್ತು. ಒಂದು ತಟ್ಟಕಡ (ರಸ್ತೆ ಬದಿಯಲ್ಲಿರುವ ತಾತ್ಕಾಲಿಕ ಖಾನಾವಳಿ/ಹೋಟೇಲು) ತಟ್ಟುಕಡದಿಂದ ದೋಸೆ ಮತ್ತು ಆಮ್ಲೆಟನ್ನು ಸೇವಿಸಿದೆವು. ನಿರ್ಜನವಾದ ಒಂದು ಬಂಡೆ ಪ್ರದೇಶದಲ್ಲಿ ಆ ತಟ್ಟು ಕಡ ನಮಗೋಸ್ಕರ ಉದ್ಭವಿಸಿ ಬಂದಿದ್ದೆಂದು ತೋರಿತು. ಮಧ್ಯರಾತ್ರಿ ಕಳೆದಿತ್ತು. ಎರಡು ಮೂರು ಗಂಟೆಗಳು ಪ್ರಯಾಣಿಸಿದರೆ ಮಾವನ ಊರನ್ನು ತಲುಪುತ್ತೇವೆ.

‘ಒಂದಷ್ಟು ಹೊತ್ತು ಕಣ್ಣು ಮುಚ್ಚದೆ ಮುಂದೆ ಹೋಗಲು ಸಾಧ್ಯವಿಲ್ಲ ಸರ್’ ಡ್ರೈವರ್ ಹೇಳಿದ.

‘ಇಲ್ಲವಾದರೆ ಉತ್ತರಕ್ಕಿರುವ ಪ್ರಯಾಣ ದಕ್ಷಿಣ ದಿಕ್ಕಿನತ್ತ ಸಾಗಬಹುದು’

ತಟ್ಟುಕಡದಿಂದ ಸ್ವಲ್ಪ ಮುಂದೆ ಹೋಗಿ ಗಾಡಿ ಪಾರ್ಕು ಮಾಡಲಾಯಿತು. ಬೆಳಗಿನ ಐದು ಗಂಟೆಯವರೆಗಾದರೂ ತಟ್ಟುಕಡದವನ ಸಾಮೀಪ್ಯವಿರುತ್ತದೆ. ನಸುಕು ಹರಿಯುವಷ್ಟರಲ್ಲಿ ಗುಡ್ಡದಷ್ಟು ಮೊಟ್ಟೆ ಚಿಪ್ಪು ಮತ್ತು ಕೊಳೆತ ವಾಸನೆಯನ್ನು ಅಲ್ಲೇ ಬಿಟ್ಟು ತಟ್ಟುಕಡೆಗೆ ಬೀಗ

